**ವೆನಕತರಮನನೆ ಬರೊ**

ವೆಂಕಟರಮಣನೆ ಬಾರೋ ಶೇಷಾಚಲ ವಾಸನೆ ಬಾರೋ

ಪಂಕಜ ನಭ ಪರಮ ಪವಿತ್ರ ಶಂಕರ ಮಿತ್ರನೇ ಬಾರೋ

ಮುದ್ದು ಮುಖದ ಮಗುವ ನಿನಗೆ ಮುದ್ದು ಕೊಡುವೆನು ಬಾರೋ ನಿರ್ದಯವೇಕೋ ನಿನ್ನೊಳಗೆ ನಾನು ಪೊನ್ದಿದ್ದೇನು ಬಾರೋ ||1||

ಮನ್ಧರ ಗಿರಿಯನೆತ್ತಿದಾನನ್ದ ಮೂರ್ತಿಯೆ ಬಾರೋ ನಂದ ಅಕಂದ ಗೋವಿಂದ ಮುಕುಂದ ಇಂದಿರೆಯ ರಸನೆ ಬಾರೋ ||2||

ಕಮಾನ್ಯ ಕರುಣಾಳೊ ಶ್ಯಾಮಲ ವರ್ಣನೆ ಬಾರೋ ಕೋಮಲಾಂಗ ಶ್ರೀ ಪೂರನ್ದರ ವಿಟ್ಟಲನೆ ಸ್ವಾಮಿ ರಾಯನೆ ಬಾರೋ ||3||

**ಬಂದನೋ ಗೋವಿಂದ**

ಬಂದನೋ ಗೋವಿಂದ ಚಂದದಿ ಆನಂದ

ಸುಂದರಿಯ ಮಂದಿರಕ್ಕೆ ನಂದನ ಕಂದಾ ... ನಂದನ ಕಂದಾ ||

ಕಾನನ ದಲ್ಲಿ ಬಲು ಧೀರನಾಗಲ್ಲಿ

ವೇಣು ವೆಣುನಾದವೂ ತಾ ಕೂಡಿ ಮೊದವೂ

ಜಾಣ ನಿವನು ಸುಮಾ ಬಾಣ ಪಿತನೂ

ಮಾನಿನೀ ಮನೆಗಳಲ್ಲಿ ಗಾನ ಮಾಡುತಾ ... ಗಾನ ಮಾಡುತಾ ॥

ಓಡಿ ಬಂದರೂ ಬಲು ಬೇಡಿ ಕೊಂಡರೂ

ಗಾಡಿ ಕಾರನು ಅವರ ಕೂದಿ ಮೆರೆದನೂ

ಮಾಡಿದ ಜಾಲ .... ವಾಸುದೇವ ವಿಠಲಾ ....

ವಿಠಲಾ .... ವಿಠಲಾ ..... ವಾಸುದೇವ ವಿಠಲಾ

ಮಾಡಿದ ಜಾಲ .... ವಾಸುದೇವ ವಿಠಲಾ ....

ಮಾಡಿದ ಮನಿ ಮಾಡಿ ದಾತ ಕೂಡಿ ದಾ ನಾಗ .... ಕೂಡಿ ದಾ ನಾಗ ||

## <u>ಶ್ರೀನಿವಾಸ ನೀನೆ ಪಾಲಿಸೊ</u>

ಶ್ರೀನಿವಾಸ ನೀನೆ ಪಾಲಿಸೊ ಶ್ರಿತಜನಪಾಲ
ಗಾನಲೋಲ ಶ್ರೀ ಮುಕುಂದನೆ
ಧ್ಯಾನಮಾಳ್ಪ ಸಜ್ಜನರ ಮಾನದಿಂಪರಿಪಾಲಿಪ
ವೇಣುಗೋಪಾಲ ಗೋವಿಂದ ವೇದವೇದ್ಯ ನಿತ್ಯಾನಂದ ||ಅ.ಪ||
ಎಷ್ಟು ದಿನ ಕಷ್ಟಪಡುವುದೋ ಯಶೋದೆ ಕಂದ
ದೃಷ್ಟಿಯಿಂದ ನೋಡಲಾಗದೋ
ಮುಟ್ಟಿ ನಿನ್ನ ಭಜಿಸಲಾರೆ ಕೆಟ್ಟ ಈ ನರಜನ್ಮದೊಳು
ದುಷ್ಟ ಕಾರ್ಯ ಮಾಡಿದಾಗ್ಯೂ ಇಷ್ಟನಾಗಿ ಕೈಯ ಪಿಡಿದು ||1||
ಎಂದಿಗೆ ನಿನ್ನ ಪಾದಾಬ್ಜವ ಪೊಂದುವ ಸುಖ
ಎಂದಿಗೆ ಲಭ್ಯವೊ ಮಾಧವ
ಅಂಧಕಾರಣ್ಯದಲ್ಲಿ ನಿಂದು ತತ್ತರಿಸುತಿಹೆನು
ಅಂದದಿಂ ಭವಾಬ್ದಿಯೊಳು ಬೆಂದು ನೊಂದೆನೊ ಮುಕುಂದ ||2||
ಅನುದಿನ ಅನೇಕ ರೋಗಗಳ ಅನುಭವಿಸಿದೆನೋ
ಘನ್ನ ಮಹಿಮ ನೀನೆ ಕೇಳಯ್ಯ
ತನುವಿನಲ್ಲಿ ಬಲವಿಲ್ಲ ನೆನೆದ ಮಾತ್ರ ಸಲಹುವ
ಹನುಮದೀಶ ಪುರಂದರ ವಿಠ್ಠಲನೆ ಕೈಯ ಪಿಡಿದು ||3||

ಮನ್ಯು ಸೂಕ್ತಂ

ಋಗ್ವೇದ ಸಂಹಿತಾ; ಮಂಡಲಂ 10; ಸೂಕ್ತಂ 83,84

ಯಸ್ತೇ ಮನ್ಯೋಽವಿಧದ್ ವಜ್ರ ಸಾಯಕ ಸಹ ಓಜಃ ಪುಷ್ಯತಿ ವಿಶ್ವಮಾನುಷಕ್ ।
ಸಾಹ್ಯಾಮ ದಾಸಮಾರ್ಯಂ ತ್ವಯಾ ಯುಜಾ ಸಹಸ್ಕೃತೇನ ಸಹಸಾ ಸಹಸ್ವತಾ ॥ 1 ॥

ಮನ್ಯುರಿಂದ್ರೋ ಮನ್ಯುರೇವಾಸ ದೇವೋ ಮನ್ಯುರ್ ಹೋತಾ ವರುಣೋ ಜಾತವೇದಾಃ ।
ಮನ್ಯುಂ-ವಿಁಶ ಈಳತೇ ಮಾನುಷೀರ್ಯಾಃ ಪಾಹಿ ನೋ ಮನ್ಯೋ ತಪಸಾ ಸಜೋಷಾಃ ॥ 2 ॥

ಅಭೀಹಿ ಮನ್ಯೋ ತವಸಸ್ತವೀಯಾನ್ ತಪಸಾ ಯುಜಾ ವಿ ಜಹಿ ಶತ್ರೂನ್ ।
ಅಮಿತ್ರಹಾ ವೃತ್ರಹಾ ದಸ್ಯುಹಾ ಚ ವಿಶ್ವಾ ವಸೂನ್ಯಾ ಭರಾ ತ್ವಂ ನಃ ॥ 3 ॥

ತ್ವಂ ಹಿ ಮನ್ಯೋ ಅಭಿಭೂತ್ಯೋಜಾಃ ಸ್ವಯಂಭೂರ್ಭಾಮೋ ಅಭಿಮಾತಿಷಾಹಃ ।
ವಿಶ್ವಚರ್-ಷಣಿಃ ಸಹುರಿಃ ಸಹಾವಾನಸ್ಮಾಸ್ವೋಜಃ ಪೃತನಾಸು ಧೇಹಿ ॥ 4 ॥

ಅಭಾಗಃ ಸನ್ನಪ ಪರೇತೋ ಅಸ್ಮಿ ತವ ಕ್ರತ್ವಾ ತವಿಷಸ್ಯ ಪ್ರಚೇತಃ ।
ತಂ ತ್ವಾ ಮನ್ಯೋ ಅಕ್ರತುರ್ಜಿಹೀಳಾಹಂ ಸ್ವಾತನೂರ್ಬಲದೇಯಾಯ ಮೇಹಿ ॥ 5 ॥

ಅಯಂ ತೇ ಅಸ್ಮ್ಯುಪ ಮೇಹ್ಯರ್ವಾಙ್ ಪ್ರತೀಚೀನಃ ಸಹುರೇ ವಿಶ್ವಧಾಯಃ ।
ಮನ್ಯೋ ವಜ್ರಿನ್ನಭಿ ಮಾಮಾ ವವೃತ್ಸ್ವ ಹನಾವ ದಸ್ಯೂನ್ ಋತ ಬೋಧ್ಯಾಪೇಃ ॥ 6 ॥

ಅಭಿ ಪ್ರೇಹಿ ದಕ್ಷಿಣತೋ ಭವಾ ಮೇಽಧಾ ವೃತ್ರಾಣಿ ಜಂಘನಾವ ಭೂರಿ ।
ಜುಹೋಮಿ ತೇ ಧರುಣಂ ಮಧ್ವೋ ಅಗ್ರಮುಭಾ ಉಪಾಂಶು ಪ್ರಥಮಾ ಪಿಬಾವ ॥ 7 ॥

ತ್ವಯಾ□ ಮನ್ಯೋ ಸ॒ರಥ॑ಮಾರು॒ಜಂತೋ॒ ಹರ್॑ಷಮಾಣಾಸೋ ಧೃಷಿ॒ತಾ ಮ॑ರುತ್ವಃ ।
ತಿ॒ಗ್ಮೇ॑ಷವ॒ ಆಯು॑ಧಾ ಸಂ॒ಶಿಶಾ□ನಾ ಅ॒ಭಿ ಪ್ರಯಂ□ತು॒ ನರೋ□ ಅ॒ಗ್ನಿರೂ□ಪಾಃ ॥ 8 ॥

ಅ॒ಗ್ನಿರಿ॑ವ ಮನ್ಯೋ ತ್ವಿಷಿ॒ತಃ ಸ॑ಹಸ್ವ ಸೇನಾ॒ನೀರ್ನಃ॑ ಸಹುರೇ ಹೂ॒ತ ಏ□ಧಿ ।
ಹ॒ತ್ವಾಯ॒ ಶತ್ರೂ॒ನ್ ವಿ ಭ॑ಜಸ್ವ॒ ವೇದ॒ ಓಜೋ॒ ಮಿಮಾ□ನೋ॒ ವಿಮೃಧೋ□ ನುದಸ್ವ ॥ 9 ॥

ಸಹ॑ಸ್ವ ಮನ್ಯೋ ಅ॒ಭಿಮಾ□ತಿಮ॒ಸ್ಮೇ ರು॒ಜನ್ ಮೃ॒ಣನ್ ಪ್ರ॑ಮೃ॒ಣನ್ ಪ್ರೇಹಿ॒ ಶತ್ರೂ□ನ್ ।
ಉ॒ಗ್ರಂ ತೇ॒ ಪಾಜೋ□ ನ॒ನ್ವಾ ರು॑ರುಧ್ರೇ ವ॒ಶೀ ವಶಂ□ ನಯಸ ಏಕಜ॒ ತ್ವಮ್ ॥ 10 ॥

ಏಕೋ□ ಬಹೂ॒ನಾಮ॑ಸಿ ಮನ್ಯವೀಳಿ॒ತೋ ವಿಶಂ□ವಿ॑ಶಂ-ಯು॒ಧಯೇ॒ ಸಂ ಶಿ॑ಶಾಧಿ ।
ಅಕೃ॑ತ್ತ॒ರು॒ಕ್ ತ್ವಯಾ□ ಯು॒ಜಾ ವ॒ಯಂ ದ್ಯು॒ಮಂತ॒ಂ ಘೋಷಂ□-ವಿ॑ಜ॒ಯಾಯ॑ ಕೃಣ್ಮಹೇ ॥ 11 ॥

ವಿ॒ಜೇ॒ಷ॒ಕೃದಿಂದ್ರ ಇವಾನವಬ್ರ॒ವೋ॒(ಓ)3॑ಽಸ್ಮಾಕಂ□ ಮನ್ಯೋ ಅಧಿ॒ಪಾ ಭ॑ವೇ॒ಹ ।
ಪ್ರಿ॒ಯಂ ತೇ॒ ನಾಮ॑ ಸಹುರೇ ಗೃಣೀಮಸಿ ವಿ॒ದ್ಮಾತಮು॒ತ್ಸಂ॒-ಯತ॑ ಆಬ॒ಭೂಥ॑ ॥ 12 ॥

ಆಭೂ□ತ್ಯಾ ಸಹ॒ಜಾ ವ॑ಜ್ರ ಸಾಯಕ॒ ಸಹೋ□ ಬಿಭರ್ಷ್ಯಭಿಭೂತ॒ ಉತ್ತ॒ರಮ್ ।
ಕ್ರತ್ವಾ□ ನೋ ಮನ್ಯೋ ಸ॒ಹಮೇ॒ದ್ಯೇ□ಧಿ ಮಹಾಧ॒ನಸ್ಯ॑ ಪುರುಹೂತ ಸಂ॒ಸೃಜಿ ॥ 13 ॥

ಸಂಸೃ॑ಷ್ಟಂ॒ ಧನ॑ಮು॒ಭಯಂ□ ಸ॒ಮಾಕೃ॑ತಮ॒ಸ್ಮಭ್ಯಂ□ ದತ್ತಾಂ॒-ವರು॑ಣಶ್ಚ॒ ಮ॒ನ್ಯುಃ ।
ಭಿಯಂ॒ ದಧಾ□ನಾ॒ ಹೃದ॑ಯೇಷು॒ ಶತ್ರ॑ವಃ ಪರಾ□ಜಿತಾಸೋ॒ ಅಪ॒ ನಿಲ॑ಯಂತಾಮ್ ॥ 14 ॥

ನಾರಾಯಣ ನಾರಾಯಣ ಗೋವಿಂದ ಹರೀ

ನಾರಾಯಣ ನಾರಾಯಣ ಗೋವಿಂದ ||ಪ||

ನಾರಾಯಣ ಗೋವಿಂದ ಗೋವಿಂದ ಮುಕುಂದ ಪರತರ ಪರಮಾನಂದ ||ಅಪ||

(ಬದರಿ, ಪಂಢರಿ, ಉಡುಪಿ, ರಂಗ, ತಿರುಮಲ, ವೆಂಕಟ)

ಮೊದಲು ಮತ್ಸ್ಯನಾಗಿ ಉದಿಸಿ ಸೋಮನ ಸದೆದು ವೇದಗಳ ತಂದ |

ಮಂದರಧರ ತಾ ಸಿಂಧುವಿನೊಳಮೃತ ತಂದು ಭಕ್ತರಿಗೆ ಉಣಲೆಂದ

ನಾರಾಯಣ ನಾರಾಯಣ ಗೋವಿಂದ

ಹರಿ ನಾರಾಯಣ ನಾರಾಯಣ ಗೋವಿಂದ

ಮತ್ಸ್ಯ ನಾರಾಯಣ ನಾರಾಯಣ ಗೋವಿಂದ

ಕೂರ್ಮ ನಾರಾಯಣ ನಾರಾಯಣ ಗೋವಿಂದ

ಭೂಮಿಯ ಕದ್ದಾ ಖಳನ ಮರ್ದಿಸಿ ಆ ಮಹಾಸತಿಯೆಳ ತಂದ

ದುರುಳ ಹಿರಣ್ಯನ ಕರುಳು ಬಗೆದು ತನ್ನ ಕೊರಳೊಳಗಿಟ್ಟಾ ಬಗೆಯಿಂದಾ

ನಾರಾಯಣ ನಾರಾಯಣ ಗೋವಿಂದ

ಹರಿ ನಾರಾಯಣ ನಾರಾಯಣ ಗೋವಿಂದ

ವರಾಹ ನಾರಾಯಣ ನಾರಾಯಣ ಗೋವಿಂದ

ನರಹರಿ ನಾರಾಯಣ ನಾರಾಯಣ ಗೋವಿಂದ

ಪುಟ್ಟನಾಗಿ ಮಹಿಕೊಟ್ಟ ಬಲಿಯ ತಲೆ ಮೆಟ್ಟಿ ತುಳಿದ ದಯದಿಂದ

ಧಾತ್ರಿಯೊಳು ಮುನಿ ಪುತ್ರನಾಗಿ ಬಂದು ಕ್ಷತ್ರಿಯರೆಲ್ಲರ ಕೊಂದ

ನಾರಾಯಣ ನಾರಾಯಣ ಗೋವಿಂದ

ಹರಿ ನಾರಾಯಣ ನಾರಾಯಣ ಗೋವಿಂದ

ವಾಮನ ನಾರಾಯಣ ನಾರಾಯಣ ಗೋವಿಂದ

ಭಾರ್ಗವ ನಾರಾಯಣ ನಾರಾಯಣ ಗೋವಿಂದ

ಮಡದಿಗಾಗಿ ಸರಗಡಲನೆ ಕಟ್ಟಿ ಹಿಡಿದು ರಾವಣನ ಕೊಂದ

ಗೋಕುಲದಿ ಪುಟ್ಟಿ ಗೋವಳನೆ ಕಾಯ್ದು ಗೋಪಾಲಕೃಷ್ಣ ತಾ ಬಂದ

ನಾರಾಯಣ ನಾರಾಯಣ ಗೋವಿಂದ

ಹರಿ ನಾರಾಯಣ ನಾರಾಯಣ ಗೋವಿಂದ

ರಾಮ ನಾರಾಯಣ ನಾರಾಯಣ ಗೋವಿಂದ

ಕೃಷ್ಣ ನಾರಾಯಣ ನಾರಾಯಣ ಗೋವಿಂದ

ಛಲದಲಿ ತ್ರಿಪುರರ ಸತಿಯರ ವ್ರತದ ಫಲವನಳಿದ ಮುದದಿಂದ

ಧರೆಯೊಳು ಪರಮಾ ನೀಚರ ಸವರಿ ಕುದುರೆಯೇರಿದ ಕಲ್ಕಿ ಚಂದ

ನಾರಾಯಣ ನಾರಾಯಣ ಗೋವಿಂದ

ಹರಿ ನಾರಾಯಣ ನಾರಾಯಣ ಗೋವಿಂದ

ಬುದ್ಧ ನಾರಾಯಣ ಗೋವಿಂದ

ಕಲ್ಕಿ ನಾರಾಯಣ ಗೋವಿಂದ

ದೋಷದೂರ ಶ್ರೀ ಪುರಂದರ ವಿಠಲ ಪೋಷಿತ ಭಕ್ತ

ಸುವೃಂದ

ಬಿಡೆನೋ ನಿನ್ನಂಘ್ರಿ ಶ್ರೀನಿವಾಸ ಎನ್ನ
ದುಡಿಸಿ ಕೊಳ್ಳೆಲೋ ಶ್ರೀನಿವಾಸ ನಿನ್ನ
ನುಡಿಯೇ ಜಿತಲ್ಲೊ ಶ್ರೀನಿವಾಸ ನನ್ನ
ನಡೆತಪ್ಪು ಕಾಯೋ ಶ್ರೀನಿವಾಸ ||ಪ||

ಬಡಿಯೋ ಬೆನ್ನಲಿ ಶ್ರೀನಿವಾಸ ಎ
ನ್ನೊಡಲ ಹೊಯ್ಯದಿರೊ ಶ್ರೀನಿವಾಸ ನಾ
ಬಡವ ಕಾಣೆಲೋ ಶ್ರೀನಿವಾಸ ನಿ
ನ್ನೊಡಲ ಹೊಕ್ಕೆನೋ ಶ್ರೀನಿವಾಸ. ||೧||

ಪಂಜು ಪಿಡಿವೆನೋ ಶ್ರೀನಿವಾಸ ನಿ
ನ್ನೆಂಜಲ ಬಳದುಂಬೆ ಶ್ರೀನಿವಾಸ ನಾ
ಸಂಜೆ ಉದಯಕೆ ಶ್ರೀನಿವಾಸ ಕಾ
ಳಂಜಿಯ ಪಿಡಿವೇ ಶ್ರೀನಿವಾಸ. |೨||

ಸತ್ತಿಗೆ ಚಾಮರ ಶ್ರೀನಿವಾಸ ನಾ
ನೆತ್ತಿನಲಿವೆನೋ ಶ್ರೀನಿವಾಸ ನೆನ್ನ
ರತ್ನದ ಹಾವಿಗೆ ಶ್ರೀನಿವಾಸ ನಾ
ಹೊತ್ತು ಕುಣಿವೆನೋ ಶ್ರೀನಿವಾಸ. ||೩||

ಹೇಳಿದಂತಾಲಿಹೆ ಶ್ರೀನಿವಾಸ ನಿ
ನ್ನಾಳಿಗಾಳಾಗಿಹೆ ಶ್ರೀನಿವಾಸ ಅವ
ರೂಳಿಗವ ಮಾಳ್ಪೆ ಶ್ರೀನಿವಾಸ ಎನ್ನ
ಪಾಲಿಸೊ ಬಿಡದೇ ಶ್ರೀನಿವಾಸ. ||೪||

ನಿನ್ನ ನಾಮ ಹೋಳಿಗೆ ಶ್ರೀನಿವಾಸ ಕಳ್ಳ
ಕುನ್ನಿ ನಾನಾಗಿಹೆ ಶ್ರೀನಿವಾಸ ಕಟ್ಟಿ
ನಿನ್ನೊವರೊದ್ದರೆ ಶ್ರೀನಿವಾಸ ನನ
ಗಿನ್ನು ಲಜ್ಜೇತಕೆ ಶ್ರೀನಿವಾಸ. ||೫||

ಬೀಸಿಕೊಲ್ಲಲವರೆ ಶ್ರೀನಿವಾಸ ಮುದ್ರೆ
ಕಾಸಿ ಚುಚ್ಚಲವರೆ ಶ್ರೀನಿವಾಸ ಮಿಕ್ಕ

ಘಾಸಿಗಂಜೆನಯ್ಯ ಶ್ರೀನಿವಾಸ ಎಂಜ
ಲಾಸೆಯ ಬಂಟ ನಾ ಶ್ರೀನಿವಾಸ. ||೬||

ಹೇಸಿ ನಾನಾದರೆ ಶ್ರೀನಿವಾಸ ಹರಿ
ದಾಸರೊಳು ಪೊಕ್ಕೆ ಶ್ರೀನಿವಾಸ ಅವರ
ಭಾಷೆಯ ಕೇಳಿಹೆ ಶ್ರೀನಿವಾಸ ಆ
ವಾಸಿಯ ಸೈರಿಸೋ ಶ್ರೀನಿವಾಸ ||೭||

ತಿಂಗಳವನಲ್ಲ ಶ್ರೀನಿವಾಸ ವತ್ಸ
ರಂಗಳವನಲ್ಲ ಶ್ರೀನಿವಾಸ ರಾ
ಜಂಗಳ ಸವಡಿಪೆ ಶ್ರೀನಿವಾಸ ಭ
ವಂಗಳ ದಾಟುವೆ ಶ್ರೀನಿವಾಸ. ||೮||

ನಿನ್ನವ ನಿನ್ನವ ಶ್ರೀನಿವಾಸ ನಾ
ನನ್ಯವನರಿಯೆನೊ ಶ್ರೀನಿವಾಸ ಅಯ್ಯಾ
ಮನ್ನಿಸೊ ತಾಯ್ತಂದೆ ಶ್ರೀನಿವಾಸ ಪ್ರ
ಸನ್ನವೆಂಕಟಾದ್ರಿ ಶ್ರೀನಿವಾಸ. ||೯||

ಗೋವಿಂದ ನಾಮಾವಳಿ

ಶ್ರೀ ಶ್ರೀನಿವಾಸಾ ಗೋವಿಂದಾ ಶ್ರೀ ವೇಂಕಟೇಶಾ ಗೋವಿಂದಾ

ಭಕ್ತವತ್ಸಲಾ ಗೋವಿಂದಾ ಭಾಗವತಪ್ರಿಯ ಗೋವಿಂದಾ

ನಿತ್ಯನಿರ್ಮಲಾ ಗೋವಿಂದಾ ನೀಲಮೇಘಶ್ಯಾಮ ಗೋವಿಂದಾ

ಪುರಾಣಪುರುಷಾ ಗೋವಿಂದಾ ಪುಂಡರೀಕಾಕ್ಷ ಗೋವಿಂದಾ

ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ

ನಂದನಂದನಾ ಗೋವಿಂದಾ ನವನೀತಚೋರಾ ಗೋವಿಂದಾ

ಪಶುಪಾಲಕ ಶ್ರೀ ಗೋವಿಂದಾ ಪಾಪವಿಮೋಚನ ಗೋವಿಂದಾ

ದುಷ್ಟಸಂಹಾರ ಗೋವಿಂದಾ ದುರಿತನಿವಾರಣ ಗೋವಿಂದಾ

ಶಿಷ್ಟಪರಿಪಾಲಕ ಗೋವಿಂದಾ ಕಷ್ಟನಿವಾರಣ ಗೋವಿಂದಾ

ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ

ವಜ್ರಮಕುಟಧರ ಗೋವಿಂದಾ ವರಾಹಮೂರ್ತಿವಿ ಗೋವಿಂದಾ

ಗೋಪೀಜನಲೋಲ ಗೋವಿಂದಾ ಗೋವರ್ಧನೋದ್ಧಾರ ಗೋವಿಂದಾ

ದಶರಥನಂದನ ಗೋವಿಂದಾ ದಶಮುಖಮರ್ದನ ಗೋವಿಂದಾ

ಪಕ್ಷಿವಾಹನಾ ಗೋವಿಂದಾ ಪಾಂಡವಪ್ರಿಯ ಗೋವಿಂದಾ

ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ

ಮತ್ಸ್ಯಕೂರ್ಮ ಗೋವಿಂದಾ ಮಧುಸೂಧನ ಹರಿ ಗೋವಿಂದಾ

ವರಾಹ ನರಸಿಂಹ ಗೋವಿಂದಾ ವಾಮನ ಭೃಗುರಾಮ ಗೋವಿಂದಾ

ಬಲರಾಮಾನುಜ ಗೋವಿಂದಾ ಬೌದ್ಧ ಕಲ್ಕಿಧರ ಗೋವಿಂದಾ

ವೇಣುಗಾನಪ್ರಿಯ ಗೋವಿಂದಾ ವೇಂಕಟರಮಣಾ ಗೋವಿಂದಾ

ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ

ಸೀತಾನಾಯಕ ಗೋವಿಂದಾ ಶ್ರಿತಪರಿಪಾಲಕ ಗೋವಿಂದಾ

ದರಿದ್ರಜನ ಪೋಷಕ ಗೋವಿಂದಾ ಧರ್ಮಸಂಸ್ಥಾಪಕ ಗೋವಿಂದಾ

ಅನಾಥರಕ್ಷಕ ಗೋವಿಂದಾ ಆಪದ್ಭಾಂದವ ಗೋವಿಂದಾ

ಶರಣಾಗತವತ್ಸಲ ಗೋವಿಂದಾ ಕರುಣಾಸಾಗರ ಗೋವಿಂದಾ

ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ

ಕಮಲದಳಾಕ್ಷ ಗೋವಿಂದಾ ಕಾಮಿತಫಲದಾತ ಗೋವಿಂದಾ

ಪಾಪವಿನಾಶಕ ಗೋವಿಂದಾ ಪಾಹಿ ಮುರಾರೇ ಗೋವಿಂದಾ

ಶ್ರೀ ಮುದ್ರಾಂಕಿತ ಗೋವಿಂದಾ ಶ್ರೀ ವತ್ಸಾಂಕಿತ ಗೋವಿಂದಾ

ಧರಣೀನಾಯಕ ಗೋವಿಂದಾ ದಿನಕರತೇಜಾ ಗೋವಿಂದಾ

ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ

ಪದ್ಮಾವತೀಪ್ರಿಯ ಗೋವಿಂದಾ ಪ್ರಸನ್ನಮೂರ್ತೀ ಗೋವಿಂದಾ

ಅಭಯಹಸ್ತ ಪ್ರದರ್ಶಕ ಗೋವಿಂದಾ ಮತ್ಸ್ಯಾವತಾರ ಗೋವಿಂದಾ

ಶಂಖಚಕ್ರಧರ ಗೋವಿಂದಾ ಶಾರಂಗಗದಾಧರ ಗೋವಿಂದಾ

ವಿರಾಜಾತೀರ್ಧಸ್ಥ ಗೋವಿಂದಾ ವಿರೋಧಿಮರ್ಧನ ಗೋವಿಂದಾ

ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ

ಸಾಲಗ್ರಾಮಧರ ಗೋವಿಂದಾ ಸಹಸ್ರನಾಮಾ ಗೋವಿಂದಾ

ಲಕ್ಷ್ಮೀವಲ್ಲಭ ಗೋವಿಂದಾ ಲಕ್ಷ್ಮಣಾಗ್ರಜ ಗೋವಿಂದಾ

ಕಸ್ತೂರಿತಿಲಕ ಗೋವಿಂದಾ ಕಾಂಚನಾಂಬರಧರ ಗೋವಿಂದಾ

ಗರುಡವಾಹನಾ ಗೋವಿಂದಾ ಗಜರಾಜ ರಕ್ಷಕ ಗೋವಿಂದಾ

ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ

ವಾನರಸೇವಿತ ಗೋವಿಂದಾ ವಾರಧಿಬಂಧನ ಗೋವಿಂದಾ

ಏಡುಕೊಂಡಲವಾಡ ಗೋವಿಂದಾ ಏಕತ್ವರೂಪಾ ಗೋವಿಂದಾ

ಶ್ರೀ ರಾಮಕೃಷ್ಣಾ ಗೋವಿಂದಾ ರಘುಕುಲ ನಂದನ ಗೋವಿಂದಾ

ಪ್ರತ್ಯಕ್ಷದೇವಾ ಗೋವಿಂದಾ ಪರಮದಯಾಕರ ಗೋವಿಂದಾ

ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ

ವಜ್ರಕವಚಧರ ಗೋವಿಂದಾ ವೈಜಯಂತಿಮಾಲ ಗೋವಿಂದಾ

ವಡ್ಡಿಕಾಸುಲವಾಡ ಗೋವಿಂದಾ ವಸುದೇವತನಯಾ ಗೋವಿಂದಾ

ಬಿಲ್ವಪತ್ರಾರ್ಚಿತ ಗೋವಿಂದಾ ಭಿಕ್ಷುಕ ಸಂಸ್ತುತ ಗೋವಿಂದಾ

ಸ್ತ್ರೀಪುಂಸರೂಪಾ ಗೋವಿಂದಾ ಶಿವಕೇಶವಮೂರ್ತಿ ಗೋವಿಂದಾ

ಬ್ರಹ್ಮಾಂಡರೂಪಾ ಗೋವಿಂದಾ ಭಕ್ತರಕ್ಷಕ ಗೋವಿಂದಾ

ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ

ನಿತ್ಯಕಳ್ಯಾಣ ಗೋವಿಂದಾ ನೀರಜನಾಭ ಗೋವಿಂದಾ

ಹಾತೀರಾಮಪ್ರಿಯ ಗೋವಿಂದಾ ಹರಿ ಸರ್ವೋತ್ತಮ ಗೋವಿಂದಾ

ಜನಾರ್ಧನಮೂರ್ತಿ ಗೋವಿಂದಾ ಜಗತ್ಸಾಕ್ಷಿರೂಪಾ ಗೋವಿಂದಾ

ಅಭಿಷೇಕಪ್ರಿಯ ಗೋವಿಂದಾ ಆಪನ್ನಿವಾರಣ ಗೋವಿಂದಾ

ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ

ರತ್ನಕಿರೀಟಾ ಗೋವಿಂದಾ ರಾಮಾನುಜನುತ ಗೋವಿಂದಾ

ಸ್ವಯಂಪ್ರಕಾಶಾ ಗೋವಿಂದಾ ಆಶ್ರಿತಪಕ್ಷ ಗೋವಿಂದಾ

ನಿತ್ಯಶುಭಪ್ರದ ಗೋವಿಂದಾ ನಿಖಿಲಲೋಕೇಶಾ ಗೋವಿಂದಾ

ಆನಂದರೂಪಾ ಗೋವಿಂದಾ ಆದ್ಯಂತರಹಿತಾ ಗೋವಿಂದಾ

ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ

ಇಹಪರ ದಾಯಕ ಗೋವಿಂದಾ ಇಭರಾಜ ರಕ್ಷಕ ಗೋವಿಂದಾ

ಪದ್ಮದಯಾಳೋ ಗೋವಿಂದಾ ಪದ್ಮನಾಭಹರಿ ಗೋವಿಂದಾ

ತಿರುಮಲವಾಸಾ ಗೋವಿಂದಾ ತುಲಸೀವನಮಾಲ ಗೋವಿಂದಾ

ಶೇಷಾದ್ರಿನಿಲಯಾ ಗೋವಿಂದಾ ಶೇಷಸಾಯಿನೀ ಗೋವಿಂದಾ

ಶ್ರೀ ಶ್ರೀನಿವಾಸಾ ಗೋವಿಂದಾ ಶ್ರೀ ವೇಂಕಟೇಶಾ ಗೋವಿಂದಾ

ಗೋವಿಂದಾ ಹರಿ ಗೋವಿಂದಾ ಗೋಕುಲನಂದನ ಗೋವಿಂದಾ

# <u>ಸಾಟಿಯುಂಟೆ ಶ್ರೀನಿವಾಸನ ದಾಸ ಕೂಟದ ಮೇಳಕೆ</u>

ಸಾಟಿಯುಂಟೆ ಶ್ರೀನಿವಾಸನ ದಾಸ ಕೂಟದ ಮೇಳಕೆ

ಬೂಟಕದ ಮಾತಲ್ಲ ಕೇಳಿರೊ ಭಜನೆ ಮಾಡುವ ತಾಳಕೆ||ಪ||

ವಾಸುದೇವನ ವರ್ಣಿಸಲು ಕಮಲಾಸನಾದಿ ಸುರೇಂದ್ರರು

ದಾಸ ಜನರ ಸಮೂಹದಳೊಗಾವಾಸವಾಗುತ ನಲಿವರು

ಸೂಸುತಿಹ ಗಂಗಾದಿ ನದಿಗಳು ಬೇಸರದೆ ಬಂದಿರುವುವು

ಕೇಶವನ ಕೊಂಡಾಟ ಧರೆಯೊಳು ಮೀಸಲಳಿಯದ ಮಧುರವು || ೧ ||

ಬಾರಿಸುತ ತಂಬೂರಿ ತಾಳವ ನಾರದರ ಸಂಸ್ಮರಿಸುತ

ಭೂರಿ ಕಿಂಕಿಣಿ ಮದ್ದಳೆಯ ಜಂಭಾರಿ ಸ್ವರದಿಂದರುಹುತ

ವಾರಿಜಾಕ್ಷನ ಪರಮ ಮಂಗಳ ಮೂರುತಿಯ ಮುಂದಿರಿಸುತ

ಮಾರುತನ ಮತವರಿತು ಬಹು ಗಂಭೀರ ಸ್ವರದಿಂದರುಹುತ || ೨ ||

ಹಿಂದೆಗಳಿಸಿದ ಹಲವು ದುರಿತವು ಕುಂದುವುದು ನಿಮಿಷಾರ್ಧದಿ

ಅಂದಿನಾದಿನ ದೋಷ ದುಷ್ಕೃತ ಒಂದು ನಿಲ್ಲದು ಕಡೆಯಲಿ

ಇಂದಿರೇಶ ಶೇಷಭೂಧರ ಮಂದಿರನು ಮಹ ಹರುಷದಿ

ಮುಂದೆ ನಲಿಯುತ ಮನಕೆ ಪೂರ್ಣಾನಂದವೀವನು ನಗುತಲಿ || ೩ ||